ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು

ಇವರ ನ್ಯಾಯಾಲಯದಲ್ಲಿ

**MVC** : 428/2022

**Pw** – 2

ಸಾಕ್ಷಿಯ ಹೆಸರು : ಜಿ ಎನ್ ಶಿವಣ್ಣ ರೆಡ್ಡಿ

ತಂದೆ ಹೆಸರು : ನಾರಾಯಣ ರೆಡ್ಡಿ

ವಯಸ್ಸು : 63 ವರ್ಷ

ಉದ್ಯೋಗ : ಆರ್ಥೋಪೆಡಿಕ್ ಸರ್ಜನ್

ವಾಸ : ಹಿರಿಯೂರು

ಸಾಕ್ಷಿಯನ್ನು ದಿಃ20.06.2024 ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ. ಬಿಕೆ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ನಾನು ಸುಮಾರು 25 ವರ್ಷಗಳಿಂದ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡುತ್ತಿದ್ದೇನೆ ಅಂಗನ್ಯೂನ್ಯತೆ ಪ್ರಮಾಣ ಪತ್ರದೊಂದಿಗೆ ಕ್ಯಾಲ್ಯುಕ್ಲೇಷನ್ ಶೀಟ್ ಕೊಡಬೇಕು ಎಂದರೆ ನಿಜ ಅದರಲ್ಲಿ ವ್ಯಕ್ತಿಯ ಎಷ್ಟು ಇರಬೇಕು, ಚಲನವಲನ ಎಷ್ಟು ಕಮ್ಮಿಯಾಗಿದೆ, ಮಾಂಸಖಂಡಗಳ ಬಲಹೀನತೆ ಬಗ್ಗೆ ಬರೆಯಬೇಕು ಎಂದರೆ ನಿಜ. ಅದನೆಲ್ಲ ಪರಿಶೀಲಿಸಿ ನೋವಿನ ಪ್ರಮಾಣ ಎಷ್ಟು ಇದೆ ಎಂದೆ ಪರಿಶೀಲಿಸಿ ಅಂಗನ್ಯೂನ್ಯತೆ ನೀಡಬೇಕು ಎಂದರೆ ನಿಜ. ಕ್ಯಾಲ್ಯುಕ್ಲೇಷನ್ ಶೀಟನ್ನು ಅಂಗನ್ಯೂನ್ಯತೆ ಅಳವಡಿಸಬೇಕೋ ಬೇಡವೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಂಗನ್ಯೂನ್ಯತೆ ಪ್ರಮಾಣ ಪತ್ರದಲ್ಲಿಯೇ ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಕೇಂದ್ರ ಸರ್ಕಾರದ Guidelines for evaluation of permanent Physical Impairment in Lower Limbs ಎಂಬ ನಿಯಮಗಳನ್ನು ಅನುಸರಿಸುತ್ತಿದ್ದೇನೆ. ಈ ಗೈಡ್ ಲೈನ್ಸ್ ಪ್ರಕಾರ ಕ್ಯಾಲ್ಯುಕ್ಲೇಷನ್ ಶೀಟನ್ನು

ಪ್ರತ್ಯೆಕವಾಗಿ ಅಳವಡಿಸಿಲ್ಲ. ಏಕೆ ಅಳವಡಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಕ್ಯಾಲ್ಯುಕ್ಲೇಷನ್ ಶೀಟನಲ್ಲಿ ನಮೂದಿಸಿ ಲೆಕ್ಕ ಹಾಕಿ ನಂತರ ಅಂಗನ್ಯೂನ್ಯತೆ ಪತ್ರದಲ್ಲಿ ನಮೂದಿಸುತ್ತೇನೆ ಎಂದು ನುಡಿಯುತ್ತಾರೆ. ಗೈಡ್ ಲೈನ್ಸ್ ಪ್ರಕಾರ ಅಂಗನ್ಯೂನ್ಯತೆ ಜೊತೆ ಕ್ಯಾಲ್ಯುಕ್ಲೇಷನ್ ಶೀಟನ್ನು ಅಳವಡಿಸಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಕ್ಯಾಲ್ಯುಕ್ಲೇಷನ್ ಹಾಜರು ಪಡಿಸಿಲ್ಲ. ನಾನು ಕ್ಯಾಲ್ಯುಕ್ಲೆಷನ್ ಮಾಡದೇ ಇದುದ್ದರಿಂದ ಅದನ್ನು ಅಳವಡಿಸಿಲ್ಲ ಎಂದರೆ ಸರಿಯಲ್ಲ. ಮನುಷ್ಯನ ದೇಹವನ್ನು ಮೂರು ಭಾಗವಾಗಿ ವಿಂಗಡಿಸುತ್ತಾರೆ ಎಂದರೆ ಸರಿ. ಯಾವುದೇ ಭಾಗಕ್ಕೆ ನ್ಯೂನ್ಯತೆ ಬಂದರೆ ಅದು ಒಟ್ಟು ದೇಹಕ್ಕೆ 1/3 ನೇ ಅಂಶ ಅಳವಡಿಸಬೇಕು ಎಂದರೆ ನಿಜ. ಒಟ್ಟು ದೇಹದ ಅಂಗನ್ಯೂನ್ಯತೆ ಎಂದು ಪ್ರತ್ಯೇಕವಾಗಿ ನಮೂದಿಸಿರುವುದಿಲ್ಲ.

ನಾನು ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ನಾನು ಅಂಗನ್ಯೂನ್ಯತೆ ಪ್ರಮಾಣ ಪತ್ರ ಮಾತ್ರ ನೀಡಿದ್ದೇನೆ. ಅರ್ಜಿದಾರರ ಮುರಿದ ಮೂಳೆ ಕೂಡಿದೆ ಎಂದರೆ ಸರಿಯಲ್ಲ. ಸಾಕ್ಷಿ ವಕ್ರವಾಗಿ ಕೂಡಿದೆ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಸಹಾಯ ಮಾಡಲು ವಕ್ರವಾಗಿ ಕೂಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಳೆಗೆ ರಾಡ್ ಹಾಕಿರುತ್ತಾರೆ. ಅದು ಈಗಲೂ ಕೂಡ ಇದೆ. ಅರ್ಜಿದಾರರ ಕಾಲಿನಲ್ಲಿ ಕುಂಟುತನ ಇರುವುದಿಲ್ಲ ಎಂದರೆ ಸರಿ. ಆದರೆ ನೋವಿನಿಂದ ನಡೆಯುತ್ತಾನೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಅರ್ಜಿದಾರನಿಗೆ ಯಾವುದೇ ತೊಂದರೆ ಇರದಿದ್ದರೂ ಸಹ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಹೇಳಿಕೆ ಆಧಾರದ ಮೇಲೆ ಆತನಿಗೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ ಅರ್ಜಿದಾರನಿಗೆ ಯಾವ ರೀತಿ ಮುಂದುವರೆದ ಚಿಕಿತ್ಸೆ ಕೊಟ್ಟಿದ್ದೇನೆ ಎಂದು ನಮೂದಿಸಿಲ್ಲ ಎಂದರೆ ಸರಿ. ಲಿಮಿಟೇಷನ್ ಆಫ್ ಮುಮೆಂಟ್ ಯಾವ ಕಾಲಿಗೆ ಎಂದು ನಮೂದಿಸಿಲ್ಲ ಎಂದರೆ ಸರಿ. ಯಾರದೇ

ಸಹಾಯವಿಲ್ಲದೆ ಅರ್ಜಿದಾರ ನಡೆಯುತ್ತಾನೆ ಎಂದರೆ ಸರಿ. ತುಂಬಾ ದೂರ ನಡೆಯಲು ಅರ್ಜಿದಾರನಿಗೆ ಸಾಧ್ಯವಿಲ್ಲ ಎಂದು ಶೇ.10 ರಷ್ಟು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ. ಮೆಟ್ಟಿಲು ಹತ್ತಿಲು, ಕೆಳಗೆಕೂರಲು ಅರ್ಜಿದಾರನಿಗೆ ತೊಂದರೆ ಇದೆ ಎಂದು ಯಾವ ಪರೀಕ್ಷೆ ಮಾಡದೇ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ ಅರ್ಜಿದಾರರು ವ್ಯವಸಾಯ ಕೆಲಸ ಮಾಡುತ್ತಾರೆ ಅವರಿಗೆ ಆದಾಯದ ನಷ್ಟ ಎಷ್ಟು ಬರುತ್ತದೆ ಎನ್ನುವ ಬಗ್ಗೆ ನಮೂದು ಮಾಡಿರುವುದಿಲ್ಲ. ಅರ್ಜಿದಾರನ ಕೈ ಮೂಳೆ ವಕ್ರವಾಗಿ ಕೂಡಿರುತ್ತದೆ ಬಲಗೈಯಲ್ಲಿ ಕೆ ವೈರ್ ಇರುತ್ತದೆ. ಕೈಗೆ ಸಾಮಾನ್ಯ ಸ್ವರೂಪದ ಮೂಳೆ ಮುರಿತ ಉಂಟಾಗಿದೆ ಎಂದರೆ ಸರಿ. ಅಂತಹ ಮೂಳೆ ಮುರಿತಕ್ಕೆ 5 ರಿಂದ 6 ವಾರಗಳ ತನಕ ಪಿ ಒ ಪಿ ಅಳವಡಿಸಿದಲ್ಲಿ ಸರಿ ಹೋಗುತ್ತದೆ ಎಂದರೆ ಸರಿ. ಆದರೆ ಈ ಅರ್ಜಿದಾರನಿಗೆ ಮಾತ್ರ ವಕ್ರವಾಗಿ ಕೂಡಿದೆ ಎಂದು ನುಡಿಯುತ್ತಾರೆ ಆ ಸಮಯದಲ್ಲಿ ಭಾರವಾದ ವಸ್ತು ಎತ್ತಿದಲ್ಲಿ ಅಥವಾ ಕೆಲಸ ಮಾಡಿದಲ್ಲಿ ವಕ್ರವಾಗಿ ಕೂಡಿದೆ ಎಂದರೆ ಸರಿ. ಕೈಗೆ ಮತ್ತು ಕಾಲಿಗೆ ಪ್ರತ್ಯೆಕವಾಗಿ ಅಂಗನ್ಯೂನ್ಯತೆ ನಮೂದಿಸಿರುತ್ತೇನೆ. ಅರ್ಜಿದಾರನ ಕೈಗೆ ಯಾವುದೇ ರೀತಿ ಅಸಮರ್ಥತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಎದುರುದಾರರು ಏಕಪಕ್ಷಿಯವಾಗಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಹಿರಿಯೂರು